ನೆಂದೀದುರ್ಗದ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ರಾಣಾಚಿಂಗನ ಪೇಟೆಯಲ್ಲಿರುವ ಬಿಸ್ತರ ಮೈಲಾರಪ್ಪನ ವಿಷಯದಲ್ಲಿ—

ಸ್ಟ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 127.

ಹುಕ್ಕುಂ.

ಮೇಲ್ಕಂಡ ಮೈಲಾರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜಿದಾರನನ್ನು ಮತ್ತು ಸದರೀಯವರ ಲೇಣೇದಾರರಾದ 7ನೇ ಬೆಂಗಳೂರು ತಾಲ್ಲೂಕು ಕೆಂಗೇರಿಯಲ್ಲಿರುವ ಶಿವಾಚಾರದ ಮುದ್ದಪ್ಪ ಘವತಿ ಈತನ ಹೆಂಡತಿ ವೀರಮ್ಮನ ತರಫ: ಅಡ್ವೊಕೇಟ್ ಮೆಸ್ಟರ್ ಕೃಷ್ಣಮೂರ್ತಿರಾಯರು, ಮತ್ತು 8ನೇ ಬೆಂಗಳೂರು ಕರ್ಣಾಟಕ ಬ್ಯಾಂಕ್ ಆಫಿಷಿಯಲ್ ಲಿಕ್ವಿಡೇಟರ್ ಸೀತಾರಾಮಯ್ಯನ ಯದುರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾಕಂದರೆ—1ನೇ ಬೆಂಗಳೂರು ಬಳ್ಳಾಪುರದ ಪೇಟೆಲಿ ಚವುಡೇಶ್ವರಿ ಗುಡಿಬಳಿ ಇರುವ ಮುನಿಗುರಪ್ಪ, 2ನೇ ಮುನಿಗುರಕಟ್ಟಿ, 3ನೇ ಬೆಂಗಳೂರು ರಾಣಾಚಿಂಗನಪೇಟೆಲಿರುವ ಮಣೆದ ರಾಮಣ್ಣ, 4ನೇ ಬೆಂಗಳೂರು ಅಕ್ಕಿ ಪೇಟೆಲಿರುವ ಚನ್ನ ಸಂದ್ರದ ಮುನಿಯಪ್ಪ, 5ನೇ ಬೆಂಗಳೂರು ಬಸ್ಸೆಟ್ಟಿ ಪೇಟೆಲಿರುವ ಪಟೆಗಾರ ಕಳಕಪ್ಪ, 6ನೇ ಬೆಂಗಳೂರು ಚಿಕ್ಕ ಪೇಟೆಲಿರುವ ಕತ್ರಿಡಿಕ್ವಾಸ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮೈಲಾರಪ್ಪನು ಹೊಂದುವದಕ್ಕೆ ಹಕ್ಕು ದರರಾಗುವದರ ಮೂಲಕ ತನ್ನ ಸಾಲಗಾರ್ರಿಗೆ ಪೂರ್ತಿ ಬಗ್ಗೆ ಮೋಹಯಾನಾ ತಪ್ಪದೆ ಕೋರ್ಟಿಗೆ (2—0—0) ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಷರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಟ 1896ನೇ ಇಸವಿ ಫಿಬ್ರವರಿ 17ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರ್	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಹಿಂಬಾಲಗು.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾ ದರೂ ಇದ್ದರೆ.	ಷರಾ.
1	ಬೆಂಗಳೂರು ಬಳ್ಳಾಪುರದ ಪೇಟೇಲಿ ಚವುಡೇಶ್ವರಿ ಗುಡಿಬಳಿ ಇರುವ 1ನೇ ಮುನಿಗುರಪ್ಪ 2ನೇ ಮುನಿಗುರುಕಟ್ಟಿ ..	346—8—4	..	ಬೆಂಗಳೂರು ಮುನಿಸಿಫ್ ಕೋರ್ಟ್ 1895—96ನೇ ಇಸವಿ ಜಾರಿ 393ನೇ ನಂ. ವಾರಂಟ್ ಮೊಬಲಗು.	
2	ಮಣೇದ ರಾಮಂಣ ..	80—0—0	..	ಡಿಕರಿ ಮೊಬಲಗು.	
3	ಚನ್ನಸಂದ್ರದ ಮುನಿಯಪ್ಪ ..	120—0—0	..	ಪತ್ರದ ಬಾಬತು.	
4	ಕಳಕಪ್ಪ ..	10—0—0	..	ಡಿಕರಿ ಬಾಬತು.	
5	ಕತ್ರಿ ಡಿಕ್ವಾಸಾ ..	40—0—0	..	ಡಿಟೋ.	
6	ಶಿವಾಚಾರದ ಮುದ್ದಪ್ಪ ..	50—0—0	..	ಕಂತುಪತ್ರದ ಬಾಬತು.	
7	ಬೆಂಗಳೂರು ಕರ್ಣಾಟಕ ಬ್ಯಾಂಕ್ ಆಫಿಷಿಯಲ್ ಲಿಕ್ವಿಡೇಟರ್ ಶೀತಾರಾಮಯ್ಯನವರು ..	12—0—0	..	ಡಿಕರಿ ಬಾಬತು.	

ಸ್ಟ 1896ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಟ 1896—97ನೇ ಇಸವಿ ಮಿ|| ಅರ್ಜೀ ನಂಬರ್ 49.

ಮೃತಪಟ್ಟ ವೆಂಕಟರಮಣಪ್ಪನೆಂಬುವನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್‌ಗೆ ಕೀರಿದ ದೊಡ್ಡಕುಂಟೆಯಲ್ಲಿರುವ ದೇವಾಂಗದ ಲೋಕೈಯ್ಯನ ಮಗಳು ವೆಂಕಟಮ್ಮನು ಮೃತಪಟ್ಟ ನದರೀ ವೆಂಕಟರಮಣಪ್ಪನಿಗೆ ತಮ್ಮನ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂ

ರು ಸಿವಿಲ್ ಅಂಡ್ ಮಿಲಿಟೆರಿ ಸ್ಥಳದ ವೆಂಕಟಮ್ಮನು ಬೆಂಗಳೂರು ಅರಳೇಪೇಟೆ ವಾಸಸ್ಥನಾಗಿ ಮೃತಪಟ್ಟ ವೆಂಕಟರಮಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಮ್ಮನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಅಕ್ಟೋಬರ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖೆ.

ನೋ ಟಿ ಸ್ .

ತಾರೀಖು 15ನೇ ಸೆಪ್ಟಂಬರ್ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌಂ ವಜನೀ ಬಟ್ಟುಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರಾರ್‌ವಾಕಾ ಪೌಂ ವಜನಿ ಬಟ್ಟು 1ಕ್ಕೆ 38$\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ಮೆಂಟಿನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌಂ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಖಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔನ್ಸ್ 1ಕ್ಕೆ 2$\frac{3}{7}\frac{1}{9}$ ರೂಪಾಯಿ ತೂಕ ಪೌಂ 1ಕ್ಕೆ 38$\frac{8}{9}$ ಡಿಟೋ	ಹಂಡ್ರೆಡ್‌ವೆಯಿಟ್ 1ಕ್ಕೆ 4,355$\frac{5}{9}$ ರೂಪಾಯಿ ತೂಕ. ಟನ್ 1ಕ್ಕೆ 87,111$\frac{1}{9}$ ಡಿಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್‌ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನು ಅಜವಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಆವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜವಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನು ಇದರಡಿ ವಿವರಿಸಿಧೆ.